ಶ್ರೀ ಎಸ್. ಆರ್. ಕಂಠಿ.—ದಕ್ಷಿಣಕನ್ನಡ ಬಟ್ಟರೆ ಹಳೇ ಮೈಸೂರಿನಲ್ಲಿ ಹೆಚ್ಚು ಸಿಕ್ಕುತ್ತದೆ. ಆದುದರಿಂದ ಕಡಿಮೆಯಾಗುತ್ತದೆ ಎಂದು ಅನ್ನಿಸುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪ್ರೈವೇಟ್ ಶಾಲೆಗಳಿಗೆ ಮೇಂಟೆನನ್ಸ್ ಗ್ರಾಂಟ್ ಸಿಕ್ಕದೆ ಶಾಲೆ ಮುಚ್ಚಿಬಿಡುವ ಪರಿಸ್ಥಿತಿ ಬಂದಿದೆ ಎಂಬ ವಿಷಯದಲ್ಲಿ ಮನವಿ ಸರಕಾರಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸರಕಾರಕ್ಕೆ ಮನವಿ ಬಂದಿದೆ. ರೂರ್ಸ್‌ಪ್ರಕಾರ ಗ್ರಾಂಟ್ ಕೊಡುತ್ತಿದ್ದಾರೆ. ಅದಕ್ಕಿಂತ ಜಾಸ್ತಿ ಮಾಡಲು ಸಾಧ್ಯವಿಲ್ಲ.

ಶ್ರೀ ಟಿ. ಬೈರಪ್ಪಾಜಿ.—ಹಳೇ ಮೈಸೂರು ವಿಲೀನಾದಲ್ಲಿ ಹುಡುಗರ ಸಂಖ್ಯೆ ಹೆಚ್ಚಾಗಿರುವ ಸ್ಥಳದಲ್ಲಿ ಖಾಸಗಿ ಪ್ರಾಥಮಿಕ ಶಾಲೆಗೆ ಸರಕಾರ ಗ್ರಾಂಟ್ ಕೊಡುವುದಕ್ಕೆ ವಿರ್ಪಾಡು ಮಾಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ರೂರ್ಸ್ ಪ್ರಕಾರ ಏನು ಸಾಧ್ಯವೋ ಅದನ್ನು ಮಾಡುತ್ತೇವೆ. ಹುಡುಗರ ಸಂಖ್ಯೆ ಹೆಚ್ಚಾಗಿ ಇದ್ದರೆ ಪ್ರೈವೇಟ್ ಶಾಲೆ ತೆರೆಯಲು ಅವಕಾಶ ಕೊಡುವುದಿಲ್ಲ. ಆದರೆ ಸರಕಾರ ಶಾಲೆ ಪ್ರಾರಂಭಿಸುತ್ತದೆ.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದಲ್ಲಿ ಎಷ್ಟು ವಿದ್ಯಾ ಇಲಾಖೆಗಳು ಇವೆ ? ವಿದ್ಯಾ ಇಲಾಖೆಗಳಲ್ಲಿ ಎಷ್ಟು ರೀತಿ ಇವೆ ?

ಶ್ರೀ ಎಸ್. ಆರ್. ಕಂಠಿ.—ವಿದ್ಯಾ ಇಲಾಖೆ ಇರುವುದು ಒಂದೇ. ಡಿ. ಪಿ. ಐ. ಆಫೀಸ್ ಇದೆ. ಪ್ರೈವೇಟ್ ಎಜ್ಯುಕೇಷನ್ ಅವರು ನೋಡಿಕೊಳ್ಳುತ್ತಾರೆ. ಸೆಕೆಂಡರಿ ಎಜ್ಯುಕೇಷನ್ ಅವರೇ ನೋಡಿಕೊಳ್ಳುತ್ತಾರೆ. ಇನ್‌ಫರ್‌ಮೇಷನ್ ಬೇಕಾದರೆ ಅವರನ್ನು ಕೇಳಬಹುದು.

ಶ್ರೀ ಎಸ್. ಗೋಪಾಲಗೌಡ.—ನ್ಯಾಯ, ಪ್ರಾಥಮಿಕ ವಿದ್ಯಾಭ್ಯಾಸವು ಉಚಿತವಾಗಿರಬೇಕು ಕಡ್ಡಾಯವಾಗಿರಬೇಕು ಎಂಬ ತತ್ವವನ್ನು ಮಾನ್ಯ ಮಾಡಿರುವಾಗ್ಗೆ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ, ಖಾಸಗಿ ಶಾಲೆಗಳಿಗೆ ಅನುಮತಿ ಕೊಟ್ಟರುವುದು ಸರಿಯೇ ? ಹಾಗು ಶಾಲೆಗಳಿಗೆ ಏಕರೂಪತೆಗೆ ಅನುಗುಣವಾಗಿ ಒಂದೇ ರೀತಿಯಾಗಿ ಗ್ರಾಂಟ್ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳದೇ ಇರುವುದು ತಪ್ಪು ಅಲ್ಲವೇ ?

Sri S. R. KANTHI.—It is a complicated question and we will not be able to take up this immediately. Panchayat Raj Bill contains some provisions and details. There is a proposal to get up a Committee to go into the entire question.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣಕನ್ನಡ ಜಿಲ್ಲೆಯಲ್ಲಿರತಕ್ಕ ಪಾಠಶಾಲೆಗಳಿಗೆ ಈಗ ಕೊಡುತ್ತಿರುವ ಗ್ರಾಂಟ್ ಇನ್‌ಏಡ್ ಬಹಳ ಕಡಮೆಯಾಗಿರುವುದರಿಂದ, ಅವುಗಳನ್ನು ಮೆಂಟೇನ್ ಮಾಡುವುದು ಬಹಳ ಕಷ್ಟವಾಗಿದೆ, ಆದುದರಿಂದ ಅದನ್ನು ಶೇಕಡ 15ಕ್ಕಾದರೂ ಏರಿಸುವುದಕ್ಕೆ ಸಲಹೆ ಮಾಡುತ್ತಾರೆಯೇ ?

Mr. SPEAKER.—Next Question.

Sri S. R. KANTHI.—Sir,.....

Mr. SPEAKER.—The Hon'ble member and the Minister are making me helpless. I have not allowed the supplementary. I have called the next Question. The Hon'ble Member may meet the Hon'ble Minister in his chambers and get the information.

Maralavadi Tank Work.

*Q.—165. Sri S. KARIAPPA (Kanakapura).—

Will the Government be pleased to state :—

(*a*) whether any estimate for raising the bund and waste weir of aralavadi Tank in Kanakapura Taluk has been prepared ;

(*b*) if so, the date of preparation of the same ;

(*c*) what is the estimated cost ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) and (*c*) Does not arise in view of reply to clause (*a*) of the question.

ಶ್ರೀ ಎಸ್. ಕರಿಯಪ್ಪ.—ಮರಳವಾಡಿ ಕೆರೆಯ ಏರಿ ಹಾಗೂ ಕೋಡಿಯನ್ನು ಎತ್ತರಿಸುವುದಕ್ಕೆ ವರ್ಷ ವರ್ಷ ಅಲ್ಲಿಯ ರೈತರು ಒತ್ತಾಯ ಮಾಡುತ್ತಿಲ್ಲವೇ ?

†ಶ್ರೀ ಆಲೂರು ಹನುಮಂತಪ್ಪ.—ಆ ಕೆರೆಗೆ ಇರತಕ್ಕ ನ್ಯಾಯವಾದ ಆಚ್ಚುಕಟ್ಟು 1800 ಎಕರೆಗಳು, ಅನಧಿಕೃತವಾಗಿ ವ್ಯವಸಾಯವಾಗುತ್ತಿರುವ ಭೂಮಿಯ ಪರಿಮಾಣ 200 ಎಕರೆಗಳು. ಈ ಹಿಂದೆ 1948ರಲ್ಲಿ ಒಂದಾವರ್ತಿ ಆಗಲೇ ಈ ಕೆರೆಯ ಕೋಡಿಯನ್ನು 2 ಅಡಿಗಳವರೆಗೂ ಎತ್ತರಿಸಲಾಗಿದೆ. ಆದರೆ ಈಗ ಚೈರೆಂಡ್ ಜಮೀನುಗಳಿಗೆ ನೀರಿಗೆ ತೊಂದರೆ ಇದೆಯೆಂದು ತಿಳಿದುಬರುತ್ತಿದೆ. ಅದಕ್ಕಾಗಿ ಒಂದು ಫೀಡರ್ ಫಾನಲನ್ನು ಮಾಡಿದರೆ ಅನುಕೂಲವಾಗುವುದಿಲ್ಲವೇ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಬಿ. ಚನ್ನಬೈರೇಗೌಡ.—ಅಕ್ರಮ ಸಾಗುವಳಿ ಅಂದರೇನು ?

ಶ್ರೀ ಆಲೂರು ಹನುಮಂತಪ್ಪ.—ಅಧಿಕೃತ ತರೀ ಭೂಮಿಯ ಪಕ್ಕದಲ್ಲಿರತಕ್ಕ ಖುಷ್ಕಿ ಜಮೀನಿನವರು ನೀರನ್ನು ಬಹು ಕಾಲದಿಂದಲೂ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದು ಸರಿಯಾದ್ದಲ್ಲ. ಅದನ್ನು ಅನಧಿಕೃತ ತರೀ ಸಾಗು ಎಂದು ಹೇಳುತ್ತಾರೆ.

ಶ್ರೀ ಎಸ್. ಕರಿಯಪ್ಪ.—ನನ್ನ ಪ್ರಶ್ನೆ ಬೇರೆ. ಕೆರೆಯ ಕೋಡಿ ಮತ್ತು ಏರಿಗಳನ್ನು ಎತ್ತರಿಸತಕ್ಕ ಪ್ರಶ್ನೆಯೇನಾಯಿತು ?

ಶ್ರೀ ಆಲೂರು ಹನುಮಂತಪ್ಪ.—1948ರಲ್ಲೇ 2 ಅಡಿಯನ್ನು ಎತ್ತರಿಸಿರುವುದರಿಂದ ಈಗ ಫೀಡರ್‌ನಲ್ಲನ ಪ್ರಶ್ನೆ ಮಾತ್ರ ಸರ್ಕಾರದವರ ಮುಂದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರದವರು ಮಾಸ್ಟರ್ ಪ್ಲಾನನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದರಲ್ಲಾ..... .....

Mr. SPEAKER.—All that has been said till now is disallowed.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ನೀರಾವರಿ ಯೋಜನೆ ಆ ಮಾಸ್ಟರ್ ಪ್ಲಾನಿನಲ್ಲಿ ಸೇರಿದೆಯೇ ಮತ್ತು ಅದನ್ನು ಯಾವಾಗ ಇಂಪ್ಲಿಮೆಂಟ್ ಮಾಡರಾಗುವುದು ?

Mr. SPEAKER.—It is disallowed.

Mr. SPEAKER.—I put question No. 269.

Express Bus Service.

*Q.—269. Sri R. KENCHAPPA (Pavagada).—

Will the Government be pleased to state :—

(*a*) whether it has come to their notice that the people of Pavagada Taluk are experiencing inconvenience for want of direct bus convenience as the M. S. R. T. C. bus that starts from Y. N. Hosakote reaches Bangalore late and the people are not able to attend to their work in Courts and offices and return the same day ;

(*b*) whether they have received any representation in this behalf from the people ;

(*c*) whether the concerned Department would arrange as early as possible to convert the existing bus service into an express bus service and to leave Y. N. Hosakote at 6-00 A.M. and reach Bangalore at 10-30 or 11 A.M. and reach Y. N. Hosakote at 8-00 or 8-30 P.M. leaving Bangalore at 4-00 or 4-30 P.M. ?